**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 487/2016**

ಡಿ ಡಬ್ಲ್ಯೂ -1

**ದಿನಾಂಕ 30-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಬಿ.ಕೆ.ಎನ್ ವಾದಿ ಪರ ವಕೀಲರುಃ**

ನನ್ನ ಹೆಸರು ಸೈಯದ್ ನಾಜೀಮ್. ನನ್ನ ಹೆಸರು ನಾಜೀಮ್ ಪಾಷಾ ಎಂದು ಸಹ ಕರೆಯುತ್ತಾರೆ. ಆದರೆ ಪ್ರಮಾಣ ಪತ್ರದಲ್ಲಿ ಸೈಯದ್ ನಾಜೀಮ್ ಎಂದು ಬರೆಸಿರುವುದಿಲ್ಲ ಆ ರೀತಿ ಬರೆಯಲು ತೊಂದರೆ ಇರಲಿಲ್ಲ. ನನ್ನ ಆಧಾರ ಪತ್ರವನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಮ್ಮ ತಂದೆಯ ಹೆಸರು ಸೈಯದ್ ನವಾಬ್. ನನ್ನ ಪ್ರಮಾಣ ಪತ್ರದಲ್ಲಿ ನವಾಬ್ ಜಾನ್ ಎಂದು ನಮೂದಾಗಿದೆ ಎಂದರೆ ಅದು ನನಗೆ ಗೊತ್ತಿಲ್ಲ.

2. ಸದರಿ ಪ್ರಕರಣದ ಸಲುವಾಗಿ ನನ್ನ ಆಧಾರ ಕಾರ್ಡನ್ನು ತಿದ್ದುಪಡಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾತನ ಹೆಸರು ಕೆ.ಎಮ್ ಉಸ್ಮಾನ. ನಮ್ಮ ತಾತ ಕೆ.ಎಮ್ ಉಸ್ಮಾನ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿದ್ದೇನೆ. ನಾನು ಎಸ್ ಎಸ್ ಎಲ್ ಸಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನನ್ನ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸಲು ತೊಂದರೆ ಇರುವುದಿಲ್ಲ.

3. ನಿಪಿ-1 ರಲ್ಲಿರುವ ಕೊನೆಯ ಸಹಿ ನನ್ನದೇ ಆಗಿರುತ್ತದೆ ಸಾಕ್ಷಿ ನಿಪಿ-1 ರಲ್ಲಿರುವ ಎಲ್ಲಾ ಪುಟಗಳ ಸಹಿಗಳನ್ನು ನೋಡಿ ತನ್ನದೇ ಎಂದು ಗುರುತಿಸಿರುತ್ತಾರೆ. ನಿಪಿ-1 ರಲ್ಲಿ ನನ್ನ ಸಹಿಯ ಜೊತೆಗೆ ಶಾಜಿದಾ ಬಾನು ರವರ ಹೆಬ್ಬೆಟ್ಟಿನ ಸಹಿ ಹಾಗೂ ಕೆ ಎ ಅಜೆಜ್ ರವರ ಸಹಿ ಇದೆ ಎಂದರೆ ಸರಿ. ಶಾಜಿದಾ ಬಾನು ರವರು ನಮ್ಮ ತಾಯಿಯ ತಾಯಿ ಅಜ್ಜಿ ಹಾಗೂ ಎರಡನೇ ಪ್ರತಿವಾದಿ ಅಜೀಜ್ ಸಹೋದರಮಾವ.

**4.** ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಯಾವುದೊಂದು ದಾಖಲೆಯನ್ನು ಸಹಿ ಮಾಡುವ ಪೂರ್ವದಲ್ಲಿ ದಾಖಲೆಯಲ್ಲಿನ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ಮಿರ್ಲೇ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನಾನು ಶಾಜಿದಾ ಬಾನು ಮತ್ತು ಸೈಯದ್ ಅಜೀಜ್ ರವರು ಸಹಿಗಳನ್ನು ಮಾಡಿರುತ್ತೇವೆ ಎಂದರೆ ನಾನು ಸಹಿ ಮಾಡಿರುತ್ತೇ ನೆ ಅವರು ಸಹಿ ಮಾಡಿರುವುದನ್ನು ನಾನು ನೋಡಿರುವುದಿಲ್ಲ. ಸದರಿ ದಿನ ನಾನು ನನ್ನ ಅಧಾರ ಕಾರ್ಡನ್ನು ತೆಗೆದುಕೊಂಡು ಹೋಗಿರುವುದಿಲ್ಲ.

**5.** ನಿಪಿ-1 ರಲ್ಲಿರುವ ಪೊಟೋಗಳನ್ನು ಮತ್ತು ಹೆಬ್ಬೆಟ್ಟಿನ ಗುರುತುಗಳನ್ನು 3 ಜನರು ಒಟ್ಟಿಗೆ ಮಾಡಿರುತ್ತೇವೆ ಮತ್ತು ಸಹಿಗಳನ್ನು ಸಹ ಒಟ್ಟಿಗೆ ಹಾಕಿರುತ್ತೇವೆ. ಅದೇ ರೀತಿ ನಿಪಿ-1 ರಲ್ಲಿ ರಾಜೇಗೌಡ ಬಿನ್ ಮರಿಗೌಡ ರವರ ಸಹಿ ಸಹ ಇದೆ ಎಂದರೆ ಸರಿ. ಸದರಿ ಸಹಿಯನ್ನು ನಾವು ಸಾಲದ ಭದ್ರತೆಗಾಗಿ ಮಾಡಿರುತ್ತೇವೆ. ನಮ್ಮ ಅಜ್ಜಿ ನಮ್ಮ ಬಳಿ 10,000/- ಹಣ ಪಡೆದಿದ್ದಾಗಿ ತಿಳಿಸಿರುತ್ತಾರೆ.

**6**. ಸದರಿ ನಿಪಿ-1 ರಲ್ಲಿ 2,50,000/- ಹಣವನ್ನು ಪಡೆದುಕೊಂಡಿದ್ದಾಗಿ ನಮೂದಾಗಿದೆ ಎಂದರೆ ಸಾಕ್ಷಿ ಸದರಿ ದಿನ ನಾನು ಪತ್ರವನ್ನು ಓದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನೋಂದಾಣಾಧಿಕಾರಿ ಸಹಿಗಳನ್ನು ಪಡೆಯುವ ಮೊದಲು ನಮ್ಮ ಬಗ್ಗೆ ವಿವರಗಳನ್ನು ಪಡೆದುಕೊಳ್ಳುತ್ತಾರೆ ಎಂದರೆ ನಮ್ಮ ಬಳಿ ಕೇಳಿರುವುದಿಲ್ಲ ಎಂದು ತಿಳಿಸಿರುತ್ತಾರೆ. ವಾದಿ ರಾಜೇಗೌಡರಿಗೆ ಜಮೀನನ್ನು ಮಾರಾಟ ಮಾಡಲು ಒಪ್ಪಿ ದಿಃ 22-06-2013 ರಂದು ಕ್ರಯದ ಒಪ್ಪಂದ ಪತ್ರವನ್ನು ವಾದಿಗೆ ಮಾಡಿಕೊಟ್ಟಿರುತ್ತೇವೆ ಎಂದರೆ ಸಾಕ್ಷಿ ಸದರಿ ಆಸ್ತಿಯು ನಮಗೆ ಸೇರಿಲ್ಲ ಎಂದು ತಿಳಿಸಿರುತ್ತಾರೆ.

7. ದಾವಾ ಆಸ್ತಿಯು ಶಾಜೀದಾ ಬಾನು ಮತ್ತು ಅಜೀದ್ ಪಾಷಾ ರವರಿಗೆ ಸೇರಿದ ಆಸ್ತಿ ಎಂದು ನಿಪಿ-1 ರಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ವಾದಿ ರಾಜೇಗೌಡರನ್ನು ನಾನು ನೋಡಿರುವುದಿಲ್ಲ ಮತ್ತು ಅವರ ಪರಿಚಯ ಇರುವುದಿಲ್ಲ. ನಾನು ಇಲ್ಲಿಯವರೆಗೂ ಅವರನ್ನು ನೋಡಿರುವುದಿಲ್ಲ. ನೋಂದಣಾಧಿಕಾರಿ ಕಚೇರಿಯಲ್ಲಿ ನಮ್ಮ ಜೊತೆ ವಾದಿ ಮೃತ ರಾಜೇಗೌಡ

ಸಹ ಸಹಿ ಮಾಡಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ.

**8**. ನಿಪಿ-1 ರ ಪ್ರಕಾರ ನಾನು ಮತ್ತು ಪ್ರತಿವಾದಿ 1 ಮತ್ತು 2 ಮೂರು ಜನ ಸೇರಿ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡು ಒಪ್ಪಿಕ್ರಯದ ಮೊಬಲಗು 2,70,000/- ಹಣವನ್ನು ನಿಗದಿ ಪಡಿಸಿ ಮುಂಗಡವಾಗಿ 2,50,000/- ಹಣವನ್ನು ವಾದಿಯ ಕಡೆಯಿಂದ ಪಡೆದು ಉಳಿದ ಬಾಕಿ 20,000/- ಹಣವನ್ನು 3 ವರ್ಷಗಳ ಒಳಗೆ ಪಡೆದುಕೊಂಡು ಕ್ರಯ ಪತ್ರವನ್ನು ಮಾಡಿಕೊಡುವುದಾಗಿ ಒಪ್ಪಿ ನಿಪಿ-1 ಕ್ರಯದ ಕರಾರು ಪತ್ರವನ್ನು ವಾದಿಯ ಹೆಸರಿಗೆ ಮಾಡಿಕೊಟ್ಟಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ.

**9.** ಸಾಮಾನ್ಯವಾಗಿ ಜಮೀನಿನ ಮಾರಾಟಗಾರ ಪತ್ರವನ್ನು ಬರೆಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯ ಹೆಸರು ನಿಪಿ-1 ರಲ್ಲಿ ಕೆ ಎಮ್ ಉಸ್ಮಾನ ಎಂದು ಒಪ್ಪಿ ಸಹಿ ಮಾಡಿರುತ್ತೇನೆ ಎಂದರೆ ನಾನು ಅದನ್ನು ನೋಡಿರುವುದಿಲ್ಲ. ಸದರಿ ವಿಚಾರವು ನನಗೆ ವಕೀಲರ ನೋಟೀಸ್ ಜಾರಿಯಾದ ನಂತರ ನನ್ನ ಗಮನಕ್ಕೆ ಬಂದಿರುತ್ತದೆ. ನೋಟೀಸ್ ಗೆ ಪ್ರತಿಯಾಗಿ ನಮ್ಮ ತಂದೆಯ ಹೆಸರು ತಪ್ಪಾಗಿ ಎಂದು ಉತ್ತರವನ್ನು ಬರೆಯಲು ನನಗೆ ಗೊತ್ತಿರುವುದಿಲ್ಲ.

**10**. ವಾದಿಗಳ ವಿರುದ್ಧ ದೂರನ್ನು ಸಲ್ಲಿಸಲು ನನಗೆ ಗೊತ್ತಿರುವುದಿಲ್ಲ. ನಮ್ಮ ತಂದೆಯ ಹೆಸರು ಕೆ ಎಮ್ ಉಸ್ಮಾನ್ ಎಂದು ಸರಿಯಾಗಿ ನಮೂದಾಗದ ಕಾರಣ ನಾವು ಯಾವುದೇ ದೂರು ಮತ್ತು ನೊಟೀಸ್ ಗೆ ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ನಿಪಿ-1 ರಂತೆ ವಾದಿಯವರಿಗೆ ಕ್ರಯ ಪತ್ರವನ್ನು ಬರೆದುಕೊಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುದರಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ನಿಪಿ-2 ನಮಗೆ ಬಂದ ನೋಟೀಸ್ ಎಂದರೆ ಸರಿ. ನಿಪಿ-3 ತಿದ್ದುಪಡಿ ನೊಟೀಸ್ ನಮಗೆ ಬಂದಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸಾಜೀದಾ ಬಾನು ಕ್ರಯದ ಒಪ್ಪಂದ

ಪತ್ರವನ್ನು ಮಾಡಿಕೊಡುವಾಗ ಅವರು ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ಅವರಿಗೆ ಕಿವಿ ಕೇಳುತ್ತಿರಲ್ಲಿಲ. ಅವರಿಗೆ ಕಿವಿ ಕೇಳುತ್ತಿರಲಿಲ್ಲ ಎಂದು ತೋರಿಸಲು ದಾಖಲೆಯನ್ನು ನೀಡಿದ್ದೇನೆ. ನಾನು ನಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಲು ನಾವು ಪ್ರತಿವಾದಿ 1 ರವರನ್ನು ನಮ್ಮ ಅಜ್ಜಿ ಎಂದು ಹೆಳುತ್ತಿದ್ದೇವೆ ಎಂದರೆ ಸರಿಯಲ್ಲ.

12. ನಿಪಿ-1 ರಲ್ಲಿ ನಮ್ಮ ಸರಿಯಾದ ವಿಳಾಸ ನಮೂದಾಗಿದೆ ಎಂದರೆ ಸರಿಯಲ್ಲ. ವಾದಿಯ ಕಡೆಯಿಂದ 2,50,000/- ಹಣವನ್ನು ಪಡೆದಾಗ ಸಾಕ್ಷಿದಾರಾದ ಶ್ರೀನಿವಾಸ ಮತ್ತು ಜವರೇಗೌಡ ಇದ್ದರು ಎಂದರೇ ನನಗೆ ಗೊತ್ತಿಲ್ಲ. ನೋಂದಾಣಾಧಿಕಾರಿಗಳ ಕಚೇರಿಯ ಬಳಿ ಸಾಕ್ಷಿದಾರರು ಇದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**13.** ಒಂದು ವೇಳೆ ನಾನು ನಿಪಿ-1 ಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿದ್ದರೆ ನನ್ನ ಹೆಸರು ಸಾಕ್ಷಿದಾರರ ಸ್ಥಳದಲ್ಲಿ ಇರುತ್ತಿತ್ತು ಎಂದರೆ ಸರಿಯಲ್ಲ. ವಾದಿ ರಾಜೇಗೌಡರು ಮೃತ ಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ನನಗೆ ನೋಟೀಸ್ ಬಂದಿರುವುದಾಗಿ ತಿಳಿಸಿರುತ್ತೇನೆ ಅದನ್ನು ಹೊರತು ಪಡಿಸಿ ಬೇರೆ ವಿಚಾರಗಳನ್ನು ತಿಳಿಸಿರುವುದಿಲ್ಲ.

**14**. ನನ್ನ ಪ್ರಮಾಣ ಪತ್ರಕ್ಕೆ ವಿಷಯಗಳನ್ನು ನಾನೇ ತಿಳಿಸಿರುತ್ತೇನೆ. ನಾನು ಸದರಿ ಪತ್ರದಲ್ಲಿ ಹಣವನ್ನು ಪಡೆದಿರುವ ಬಗ್ಗೆ ಸಾಕ್ಷಿದಾರನಾಗಿ ಸಹಿಯನ್ನು ಮಾಡಿರುವ ಬಗ್ಗೆ ತಿಳಿಸಿರುತ್ತೇನೆ. ನೊಟೀಸ್ ಬಂದಾಗ ನಾನು ವಾದಿಯನ್ನು ಭೇಟಿ ಮಾಡಿರುವುದಿಲ್ಲ ಅವರು ಯಾರು ಎಂದು ನನಗೆ ಗೊತ್ತಿಲ್ಲ. ನೊಟೀಸ್ ನಲ್ಲಿ ವಾದಿಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**15**. ವಾದಿ ಸಲ್ಲಿಸಿರುವ ನೊಟೀಸ್ ತಪ್ಪು ಮಾಹಿತಿಯನ್ನು ಒಳಗೊಂಡಿದ್ದರೆ ನಾನು ಸರಿಯಾದ ಉತ್ತರವನ್ನು ಬರೆದು ಕಳುಹಿಸುತ್ತಿದ್ದೆ. ನಾವು ವಾದಿಗೆ ಕ್ರಯ ಪತ್ರವನ್ನು ಬರೆದುಕೊಡಲು ಜವಾಬ್ದಾರನಾದ ಕಾರಣ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಎಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು ಜಮೀನಿನ ಮೇಲೆ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**16.** ಪ್ರತಿವಾದ ಪತ್ರಕ್ಕೆ ಮಾಹಿತಿಯನ್ನು ನಮ್ಮ ತಾಯಿ ನೀಡಿರುತ್ತಾರೆ. ನಂತರ ನಾನು ಅದೇ ಪ್ರತಿವಾದ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನಗೆ ಇಂಗ್ಲೀಷ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಪ್ರತಿವಾದ ಪತ್ರವನ್ನು ಕನ್ನಡದಲ್ಲಿ ಸಲ್ಲಿರುತ್ತೇನೆ. ಪ್ರತಿವಾದ ಪತ್ರವನ್ನು ನಾನು ಓದಿ ಸಹಿಯನ್ನು ಮಾಡಿರುತ್ತೇನೆ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಾಕಾಶವನ್ನು ಕೋರಿದ್ದರಿಂದ ಕಾಲಾವಕಾಶವನ್ನು ನೀಡಲಾಯಿತು

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ